> ರೇವತಿ ಬಾಗಿಲ ಬಳಿಯೆ ನಿಂತಿದ್ದಳು ಅಂತ ಕಾಣುತ್ತದೆ. ಬಾಗಿಲು ತೆರೆಯಿತು, ಆದರೆ ರೇವತಿ ಬಾಗಿಲ ಬಳಿ ಇರಲಿಲ್ಲ. ನಾನು ಬಾಗಿಲು ಮುಚ್ಚಿ, ಹೋಗಿ ಕುರ್ಚಿಯ ಮೇಲೆ ಕುಳಿತುಕೊಂಡೆ. ರೇವತಿ ಏನೂ ಮಾತನಾಡಲಿಲ್ಲ. ದೃಷ್ಟಿಗೆ ದೃಷ್ಟಿ ನೆಟ್ಟು ಊಹಿಸುತ್ತಿದ್ದಳು.

'ನಿನ್ನ ಒಪ್ಪಿಗೆ ಇದೆಯಲ್ವೆ ಈ ಮದ್ವೆಗೆ?' ಏನಾದರೂ ಮಾತಾಡುವ ನೆವದಲ್ಲಿ ಕೇಳಿದೆ.

ಇಷ್ಟು ಹೊತ್ತು ತಡೆದುಕೊಂಡಿದ್ದ ಸ್ವಾತಿಯ ಕಣ್ಣೀರ ಕಟ್ಟೆ ಒಡೆಯಿತು. ಅವಳು ತಲೆಯಲ್ಲಾಡಿಸಿ 'ಹೌದು' ಅಂದಳು. ತನ್ನ ತಲೆ ನನ್ನ ಎದೆಗಾನಿಸಿದಳು. ಈಗ ಅವಳು ಮುಕ್ತವಾಗಿ ಅಳತೊಡಗಿದಳು. 'ಪ್ರಕಾಶ ಇಷ್ಟು ವರ್ಷ ನಾವಿಬ್ರೂ ಭೆಟ್ಟಿಯಾಗಿರಲಿಲ್ಲ. ಆದರೆ ನೀನು ಗೋವೆಯಲ್ಲಿದ್ದೀ ಅಂತ ನಾನು ಧೈರ್ಯವಾಗಿದ್ದೆ. ಈಗ ನಾನು ಮದುವೆಯಾಗಿ ಮುಂಬಯಿಗೆ ಹೋಗುವವಳಿದ್ದೇನೆ. ಪಾಪ ಅವ್ವ ಒಬ್ಬಳೇ ಮನೆಯಲ್ಲಿರಬೇಕಾಗುತ್ತೆ.'

ನಾನು ಸ್ವಾತಿಯ ತಲೆ ಮೇಲೆ ಕೈಯಿಟ್ಟು ಹೇಳಿದೆ. 'ಅಳಬೇಡ ಸ್ವಾತಿ. ನಾನು ನಿನಗೆ ಮಾತು ಕೊಡುತ್ತೇನೆ. ನಿನ್ನವ್ವನ ಚಿಂತೆ ನೀನು ಮಾಡಬೇಡ. ನಾನು ಒಂದೆರೆಡು ದಿನಗಳಲ್ಲಿ ರೇವತಿಗೆ ಕರೆದುಕೊಂಡು ಮ್ಹಾಪ್‌ಶೆಗೆ ನಿನ್ನ ಮನೆಗೆ ಬರ್‍ತೀನಿ.'

ನಾನು ಸ್ವಾತಿಯ ಬೆನ್ನು ಚಪ್ಪರಿಸಿದೆ. ಇಬ್ಬರ ಹೃದಯಗಳು ಭಾರವಾಗಿದ್ದವು. ಮಾತು ಮೂಕವಾಗಿತ್ತು.

ಮನೆಗೆ ಬಂದಾಗ ಎಂಟೂವರೆಯಾಗಿತ್ತು. ರೇವತಿ ಸಿಟ್ಟಾಗುತ್ತಾಳೆಂದು ನನಗೆ ಗೊತ್ತಿತ್ತು. ನನ್ನ ಮನಸ್ಸು ಭಾರವಾಗಿತ್ತು. ಸ್ವಾತಿಯ ಆ ಕಣ್ಣೀರು, ಆ ನೋಟ, ತಾಯಿಯ ಸ್ಥಿತಿ, ನೆನಪು ಚಿಕ್ಕಂದಿನ ಆ ದಿನಗಳ ನೆನಪು ಗಾಳಿಯಲ್ಲಿ ಹಾರುವ ಹತ್ತಿಯಂತೆ ಹೃದಯದಲ್ಲಿ ದಟ್ಟೈಯಿಸಿ ಹೃದಯ ತೂಗಾಡುತ್ತಿದ್ದಾಗ ನಾನು ಬಂದು ಮನೆಯ ಬಾಗಿಲು ತಟ್ಟಿದೆ.

ರೇವತಿ ಬಾಗಿಲ ಬಳಿಯೆ ನಿಂತಿದ್ದಳು ಅಂತ ಕಾಣುತ್ತದೆ. ಬಾಗಿಲು ತೆರೆಯಿತು, ಆದರೆ ರೇವತಿ ಬಾಗಿಲ ಬಳಿ ಇರಲಿಲ್ಲ. ನಾನು ಬಾಗಿಲು ಮುಚ್ಚಿ, ಹೋಗಿ ಕುರ್ಚಿಯ ಮೇಲೆ ಕುಳಿತುಕೊಂಡೆ. ರೇವತಿ ಬಂದಳು. ಏನೂ ಮಾತನಾಡಲಿಲ್ಲ. ದೃಷ್ಟಿಗೆ ದೃಷ್ಟಿ ನೆಟ್ಟು ಊಹಿಸುತ್ತಿದ್ದಳು. ನನ್ನ ತಪಾಸಣೆಗೊಳಪಡಿಸಿದಂತೆ ನನ್ನನ್ನೇ ದಿಟ್ಟಿಸಿ ನೋಡುತ್ತಿದ್ದಳು. ಮನೆಗೆ ಮರಳಲು ಹಿಂದೆಂದೂ ಇಷ್ಟು ರಾತ್ರಿಯಾಗಿರಲಿಲ್ಲ.

ರೇವತಿ ಹತ್ತಿರ ಬಂದಳು. ಪ್ರತಿದಿನ ಬಂದಾಗ ನನ್ನ ಬುಶ್‌ಕೋಟಿನ ಗುಂಡಿ ಅವಳೆ ಬಿಚ್ಚುತ್ತಾಳೆ. ಈಗಲೂ ಅವಳು ಬುಶ್‌ಕೋಟಿನ ಗುಂಡಿ ಬಿಚ್ಚಬಹುದೆಂದು ನಾನು ದಣಿವಾರಿಸಿಕೊಳ್ಳಲು ಕುರ್ಚಿಯಲ್ಲಿ ಕೂತಿದ್ದೆ. ಅಚಾನಕ ಅವಳು ತನ್ನ ಬಲಗೈ ಮುಂದೆ ಮಾಡಿದಳು. ಒಂದು ಕ್ಷಣ ಆ ಬಿಳಿಬಣ್ಣದ ನಾಜೂಕು ಬೆರಳುಗಳನ್ನು ಚುಂಬಿಸಿ ಬಿಡೋಣವೆಂದು ಅನಿಸಿತ್ತು. ನಾನು ಏನೂ ಮಾಡಲಿಲ್ಲ. ಇನ್ನೇನು ಬುಶ್‌ಕೋಟಿನ ಬಟನ್ ಬಿಚ್ಚುತ್ತಾಳೆ ಎಂದು ನನಗೆ ಗೊತ್ತಿತ್ತು ಆದರೆ ಆ ಭಾಗ್ಯ ನನ್ನ ಹಣೆಯಲ್ಲಿರಲಿಲ್ಲ.